ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1754
ಸದಸ್ಯರ ಹೆಸರು	ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	14.03.2022
ಉತ್ತರಿಸಬೇಕಾದ ಸಚಿವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.
ಪ್ರಶ್ನೆ	**ಉತ್ತರ**
ಅ) ಕಿತ್ತೂರು ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಪದವಿ ಮುಗಿಸಿ ಉದ್ಯೋಗವನ್ನರಿಸಿ ಬೆಂಗಳೂರಿನತ್ತ ಹೆಜ್ಜೆ ಇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ) ಬೆಂಗಳೂರಿನಲ್ಲಿ ಐಟಿ ಪಾರ್ಕ್ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಯಿತು; ಪ್ರಸ್ತುತ ಎಷ್ಟು ಐಟಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿವೆ;	ಬೆಂಗಳೂರಿನಲ್ಲಿ ಐಟಿ ಪಾರ್ಕ್‌ಗಳ ನಿರ್ಮಾಣ ಕಾರ್ಯವು ಸುಮಾರು 25 ವರ್ಷಗಳಿಂದ ನಡೆದು ಬಂದಿದ್ದು, ದೊಡ್ಡ ಪ್ರಮಾಣದ ಐಟಿ ಪಾರ್ಕ್‌ಗಳನ್ನು ಖಾಸಗಿ ಸಂಸ್ಥೆಗಳಿಂದ ಸ್ಥಾಪಿಸಲಾಗಿರುತ್ತದೆ. ಐಟಿ ನಿರ್ದೇಶನಾಲಯದಲ್ಲಿ ಇಲ್ಲಿಯವರೆಗೆ 21 ಐಟಿ ಪಾರ್ಕ್‌ಗಳು ನೋಂದಣಿಯಾಗಿರುತ್ತವೆ ಹಾಗೂ ಕಾರ್ಯಾಚರಣೆಯಲ್ಲಿವೆ. ಬೆಂಗಳೂರಿನಲ್ಲಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಬರುವ ಕಿಯೋನಿಕ್ಸ್ ಸಂಸ್ಥೆಯು ಹೆಚ್.ಎಸ್.ಆರ್. ಬಡಾವಣೆಯಲ್ಲಿ K-WINGS ಐಟಿ ಪಾರ್ಕನ್ನು ಸ್ಥಾಪಿಸಿದ್ದು ಕಾರ್ಯಾಚರಣೆಯಲ್ಲಿದೆ.
ಇ) ಕಿತ್ತೂರು ಕರ್ನಾಟಕ ಭಾಗದ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳಿಗಾಗಿ ಈ ಭಾಗದಲ್ಲಿ ಐಟಿ ಪ್ರಾರಂಭಿಸುವುದು ಸೂಕ್ತ ಎನಿಸಿಲ್ಲವೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)	ಕಿತ್ತೂರು ಕರ್ನಾಟಕ ಜಿಲ್ಲೆಗಳಲ್ಲಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಐಟಿ ವಲಯದಲ್ಲಿ ಸರ್ಕಾರದಿಂದ ಈ ಕೆಳಕಂಡ ಕಾರ್ಯಕ್ರಮ/ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ. • ಈ ಭಾಗದ ಈ ಕೆಳಕಂಡ ಜಿಲ್ಲೆಗಳಲ್ಲಿರುವ ಕಾಲೇಜು/ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ನಾವೀನ್ಯತೆ ಹಾಗೂ ಆವಿಷ್ಕಾರಗಳನ್ನು ಅಭಿವೃದ್ಧಿಪಡಿಸಲು ನ್ಯೂ ಏಜ್ ಇನ್ಕ್ಯುಬೇಷನ್ ನೆಟ್‌ವರ್ಕ್ ಅನ್ನು ಸ್ಥಾಪಿಸಲಾಗಿದೆ. o ಎಸ್.ಡಿ.ಎಮ್ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಧಾರವಾಡ. o ಕೆಎಲ್‌ಎಸ್ ವಿಶ್ವನಾಥರಾವ್ ದೇಶಪಾಂಡೆ ರೂರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಉತ್ತರ ಕನ್ನಡ ಜಿಲ್ಲೆ. o BLDEA's ವಿ.ಪಿ ಡಾ॥ ಪಿಜಿ ಹಾಲಕಟ್ಟಿ ಕಾಲೇಜ್ ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ, ವಿಜಯಪುರ. o ಕಾಲೇಜ್ ಆಫ್ ಅಗ್ರಿಕಲ್ಚರ್, ವಿಜಯಪುರ. o ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು (Autonomous), ಬಾಗಲಕೋಟೆ. o ಕೆಎಲ್‌ಎಸ್ ಗೋಗಟೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಗಾವಿ. o ಕೆಎಲ್‌ಇ ಡಾ॥ ಎಮ್.ಎಸ್ ಶೇಷಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಳಗಾವಿ.

	• ಬೆಳಗಾವಿ ಜಿಲ್ಲೆಯಲ್ಲಿ ನವೋದ್ಯಮಿಗಳ ಉಪಯೋಗಕ್ಕಾಗಿ ಐಕೆಪಿ ವತಿಯಿಂದ ಕೆ-ಟೆಕ್ ಇನ್ನೋವೇಷನ್ ಹಬ್ ಹಾಗೂ ಸರ್ವಬಳಕೆಯ ಸಲಕರಣೆಗಳ ಸೌಲಭ್ಯ {Common Instrumentation Facility (CIF)}, ಸೌಲಭ್ಯವನ್ನು ಸರ್ಕಾರದ ವತಿಯಿಂದ ಸ್ಥಾಪಿಸಲಾಗಿದೆ. • ಹುಬ್ಬಳ್ಳಿಯಲ್ಲಿ ವಿಎಲ್ಎಸ್ಐ (VLSI) ಇನ್ಕ್ಯುಬೇಶನ್ ಸೆಂಟರ್ (Incubation Centre) ಮತ್ತು ದೇಶಪಾಂಡೆ ಫೌಂಡೇಶನ್‌ನಲ್ಲಿ ಇಎಸ್‌ಡಿಎಮ್ ಬ್ರೌನ್‌ಫೀಲ್ಡ್ ಕ್ಲಸ್ಟರ್ ಅನ್ನು ನವೋದ್ಯಮಿಗಳಿಗಾಗಿ ಸ್ಥಾಪಿಸಲಾಗಿದೆ.
ಈ) ಕಿತ್ತೂರು ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಐಟಿ ಪಾರ್ಕ್ ನಿರ್ಮಿಸುವ ಕುರಿತು ಯಾವುದಾದರೂ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಕಿತ್ತೂರು ಕರ್ನಾಟಕ ಭಾಗದ ಬೆಳಗಾವಿಯಲ್ಲಿ ಐಟಿ ಪಾರ್ಕ್ ನಿರ್ಮಿಸುವ ಕುರಿತು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿರುತ್ತದೆ:- ಬೆಳಗಾವಿಯಲ್ಲಿ ಐಟಿ ಪಾರ್ಕ್ ಸ್ಥಾಪನೆಯ ಕುರಿತು ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಅಭಯ ಪಾಟೀಲ, ಶಾಸಕರು (ಬೆಳಗಾವಿ ದಕ್ಷಿಣ) ಇವರು ತಮ್ಮ ಪತ್ರ ಸಂ: ಶಾಸಕರು/ ಬೆಳಗಾವಿ (ದಕ್ಷಿಣ)/ಬೆಂಗಳೂರು /00045/2019-20ರ ದಿನಾಂಕ: 13.09.2019ರ ಪತ್ರದಲ್ಲಿ ಬೆಳಗಾವಿ ನಗರದಲ್ಲಿ ಒಂದು ಬೃಹತ್ ಪ್ರಮಾಣದ ಐಟಿ ಪಾರ್ಕ್ ಸ್ಥಾಪಿಸುವಂತೆ ಕೋರಿ ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಶಾಸಕರು ಗುರುತಿಸಿರುವ ಜಮೀನು ಕೇಂದ್ರ ರಕ್ಷಣಾ ವಶದಲ್ಲಿರುವುದರಿಂದ, ಸದರಿ ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವಂತೆ ಕೋರಿ ದಿನಾಂಕ:08.01.2021 ಹಾಗೂ ದಿನಾಂಕ:09.09.2021 ರಂದು ಮಾನ್ಯ ಇಲಾಖಾ ಸಚಿವರಿಂದ ಮತ್ತು ದಿನಾಂಕ: 21.09.2021ರಂದು ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಕೇಂದ್ರ ರಕ್ಷಣಾ ಸಚಿವರಿಗೆ ಹಾಗೂ ಸದರಿ ದಿನಾಂಕದಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಕೇಂದ್ರ ರಕ್ಷಣಾ ಕಾರ್ಯದರ್ಶಿಯವರಿಗೆ ಪತ್ರ ಬರೆಯಲಾಗಿರುತ್ತದೆ. ರಕ್ಷಣಾ ಮಂತ್ರಾಲಯದ ಉತ್ತರವನ್ನು ನಿರೀಕ್ಷಿಸಲಾಗಿದೆ.

ಐಟಿಬಿಟಿ 38 ಎಲ್‌ಸಿಎಂ 2022

(ಡಾ|| ಅಶ್ವಥ್ ನಾರಾಯಣ ಸಿ. ಎನ್)

ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.